# IN THE COURT OF THE ADDL. SENIOR CIVIL JUDGE & JMFC., GUBBI
# OS – **300/2024**

Witness present and duly sworn on : 04.06.2025

Cross Examination: by Counsel for Defendants :

ಈ ದಾವೆಯನ್ನು ಗಂಗಮ್ಮ ರವರು ಸಲ್ಲಿಸಿದ್ದು, ಅವರು ನನ್ನ ತಾಯಿ. ನನ್ನ ತಾಯಿ ಆರೋಗ್ಯವಾಗಿ ಓಡಾಡಿಕೊಂಡಿದ್ದಾರೆಂದರೆ ಅವರಿಗೆ ಸ್ವಲ್ಪ ವಯಸ್ಸು ಆಗಿರುತ್ತದೆ. ನನ್ನ ತಾಯಿ ಚೆನ್ನಾಗಿ ಓಡಾಡಿಕೊಂಡು ಮತ್ತು ನ್ಯಾಯಾಲಯದ ಪ್ರಕರಣಗಳ ಜ್ಞಾನ ಇದ್ದರು ಸಹ ನಾನು ಅವರಿಂದ ಸುಳ್ಳು SPA ಬರೆಸಿಕೊಂಡಿದ್ದೇನೆಂದರೆ ಸರಿಯಲ್ಲ. ಈ ದಾವೆಯನ್ನು ಎರಡು ಆಸ್ತಿಗಳ ಮೇಲೆ ಸಲ್ಲಿಸಿದ್ದು, ಅವುಗಳು ಸರ್ವೆ ನಂ.66/1, 65/6 ಆಗಿರುತ್ತದೆ.

ದಾವಾ ಆಸ್ತಿಗಳು ಮೂಲತಹ ನನ್ನ ತಂದೆಯ ತಂದೆ ಚಿಕ್ಕೆಗೌಡರವರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಸದರಿ ಚಿಕ್ಕೆಗೌಡರವರಿಗೆ 6 ಜನ ಗಂಡು ಮಕ್ಕಳು, ಅವರುಗಳು ರಂಗಣ್ಣ, ತಿಮ್ಮಯ್ಯ, ಗುಂಡಯ್ಯ, ತೊಪೇಗೌಡ, ರಾಜಣ್ಣ, ಪಾಂಡುರಂಗಯ್ಯ, ತಿಮ್ಮಯ್ಯ. ಸದರಿ ಚಿಕ್ಕೆಗೌಡರವರಿಗೆ 5 ಜನ ಹೆಣ್ಣು ಮಕ್ಕಳು, ಅವರುಗಳು ಭಾಗ್ಯಮ್ಮ, ರಂಗಮ್ಮ, ಲಲಿತಮ್ಮ, ಸಾವಿತ್ರಮ್ಮ. ಮತ್ತೊಬ್ಬರ ಹೆಸರು ನನಗೆ ಗೊತ್ತಿಲ್ಲ. ನನ್ನ ತಂದೆಯ ಅಣ್ಣ ತಮ್ಮಂದಿರು 1969 ರಲ್ಲಿ ವಿಭಾಗ ಮಾಡಿಕೊಂಡಿದ್ದರು. ತಾರೀಖು ಮತ್ತು ತಿಂಗಳು ಗೊತ್ತಿಲ್ಲ. 1968 ರಲ್ಲಿ ನನ್ನ ತಂದೆ ಹಾಗೂ ಅವರ ಅಣ್ಣ ತಮ್ಮಂದಿರು ಭಾಗ ಮಾಡಿಕೊಂಡಿದ್ದರು ಎಂದರೆ ಸರಿ. ಸದರಿ 1968 ರ ವಿಭಾಗದ ಆಸ್ತಿಗಳಲ್ಲಿ ತಾಳೆ ಬಾರದೆ ಇದ್ದ ಕಾರಣ ಅವರು ಮತ್ತೊಂದು ಬಾರಿ 1969 ರಲ್ಲಿ ವಿಭಾಗ ಮಾಡಿಕೊಂಡಿದ್ದಾರೆಂದರೆ ಸರಿ. ನಾನು 1969 ರ ವಿಭಾಗ ಪತ್ರವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದೇನೆ.

ದಾವಾ ಆಸ್ತಿಯ ದಕ್ಷಿಣದಲ್ಲಿ ಪ್ರತಿವಾದಿಗಳು ಗುಂಡಯ್ಯನವರ ಭಾಗಕ್ಕೆ ಬಂದಿದ್ದ ಆಸ್ತಿಯಲ್ಲಿ ಇದ್ದಾರೆ ಎಂದರೆ ಸರಿ. ನನ್ನ ತಂದೆ ಮತ್ತು ಆತನ ಅಣ್ಣ ತಮ್ಮಂದಿರು ಸರ್ವೆ ಮಾಡಿಸದೆ ಬಾಯಿ ಮಾತಿನಲ್ಲಿ ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿ. ಸಾಕ್ಷಿ

ಮುಂದುವರೆದು 2023 ರಲ್ಲಿ  ಸರ್ವೆ ಮಾಡಿದಾಗ ಒತ್ತುವರಿ ಮಾಡಿರುವ ವಿಷಯ ನಮಗೆ ತಿಳಿಯಿತು.  1969 ರಿಂದ 1 ನೇ ಪ್ರತಿವಾದಿಯ ತಂದೆ ಗುಂಡಯ್ಯನವರು ಅವರ ಭಾಗಕ್ಕೆ ಬಂದಿದ್ದ  ಆಸ್ತಿಯ ಸ್ವಾಧೀನದಲ್ಲಿ ಇದ್ದು, ಸದರಿ ಆಸ್ತಿಯ ತೆಂಗಿನ ಗಿಡಗಳನ್ನು ಬೆಳೆಸಿದ್ದರು ಎಂದರೆ  ಒತ್ತುವರಿ ಮಾಡಿರುತ್ತಾರೆ.

(Further cross examination deferred at the request of counsel for the defendants )

(Typed to my dictation in open court)

R.O.I & A.C.

Addl. Senior Civil Judge and
JMFC., Gubbi